Regd No BG 155

— ಶ್ರೀ —

30—4—1962

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ನಾಯಿ ದಳಗಳ ನೆರವು

ಮದ್ರಾಸಿನ ಹತ್ತಿರದ ಅಯೋಧ್ಯಾಪುರಂ ಬಳಿ ಮೊನ್ನೆ ರಾತ್ರಿ ಪಾನಪ್ರತಿಬಂಧದಾಳಿ ನಡೆದು 14 ಮಹಿಳೆಯರು ಸೇರಿ 25 ಜನರು ಬಂಧಿಸಲ್ಪಟ್ಟರು. ನಗರದ ನಾಯಿ ದಳ ಈ ಸಂದರ್ಭದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿತು. ಈ ವರಿಗೆ ಕಳ್ಳಭಟನ ಅಥವಾ ಕೊಲೆ ಕಳವಿಗೆ ಮಾತ್ರ ನಾಯಿ ಹಿಡಿಯುವುದನ್ನು ಉಪಯೋಗಿಸಲಾಗಿತ್ತು. ಈಗ ಇದೇ ಪ್ರಥಮ ಬಾರಿ ಪಾನಪ್ರತಿಬಂಧ ಅಪರಾಧ ಪತ್ತೆಗೆ ಉಪಯೋಗಿಸಿದೆ.

ವಿಷಮ ಪರಿಸ್ಥಿತಿ

ಕಳೆದ ಶುಕ್ರವಾರ ಪೆರಂ ಜಿಲ್ಲೆಯ ಪಳ್ಳಿಯ ಬಳಿ ವಿಜಯನಗರಂ ಮಹಾರಾಜ ಕುಮಾರ ಡಾ॥ ವಿಜಯಂ ಅವರು ಜೀಪಿನ ಅಪಘಾತಕ್ಕೆ ತುತ್ತಾಗಿದ್ದರಿಂದ ಬಲರಾಂಪುರ ಆಸ್ಪತ್ರೆಯ ವೈದ್ಯಕೀಯ ಕಾಲೇಜಿನ ಪ್ರಿನ್ಸಿಪಾಲರಾದ ಡಾ॥ ಆರ್ ಎ ಸಿಂಗ್ ನಿನ್ನೆ ಅವರಿಗೆ ಶಸ್ತ್ರ ಚಿಕಿತ್ಸೆ ನಡೆಸಿದರು. ಅನಂತರ ಅವರ ಪರಿಸ್ಥಿತಿ ವಿಷಮಿಸಿದೆ.

ಜಲಸಮಾಧಿ

ಪ್ರಾದಾರಿಂದ ಶ್ರೀರಾಂಪುರಕ್ಕೆ ಕಳೆದ ಮಧ್ಯರಾತ್ರಿ ಹೊರಟ್ಟಿದ ದೋಣಿಯಲ್ಲಿ ತ್ತಿದ್ದ 12 ಜನರು ಇದ್ದ ದೋಣಿಯು ಮುಳುಗಿ ಅವರೆಲ್ಲರೂ ಜಲಸಮಾಧಿಯಾದರೆಂದು ಕಳ್ಳತಾ ವಾರ್ತೆ.

ಎಲ್ಲವೂ ನೀಲಿ

ನಿನ್ನೆ ಇಡೀ ಮೋಕಯೋ ಜಿಲ್ಲೆ ನೀಲಿ ಬಣ್ಣವಾಯಿತು. ಪ್ರತಿಯೊಂದು ನೀಲಿ ಆಯಿತು. ಗಾಳಿ, ರಸ್ತೆಗಳು, ಆಹಾರ ಮತ್ತು ದ್ರವಗಳು ಸರ್ವವೂ ನೀಲಿ ಆದವು. ಅದನ್ನು ಶುದ್ಧಿಮಾಡಲು ಹೊಂಟರೆ ಇನ್ನೂ ಕೇಡಾಯಿತು. ಕಾಚಭರಿಗೊಂಡ ಜನರು ವೈದ್ಯರ ಬಳಿ ಓಡಿದರು. ಅಣು ಕಿರಣಗಳು ಬೀಳುತ್ತಿರಬಹುದೆಂಬುದು ಅವರ ಗಾಬರಿ. ಆತಂಕದಿಂದ ಬಣ್ಣಹಾರಿಬಹುದೆಂದು ವೈದ್ಯರ ಅಭಿಪ್ರಾಯ.

ಲಿಂಗ ಬದಲಾವಣೆ

ಕೊಯ್ಮತ್ತೂರಿನ ಜನರಲ್ ಆಸ್ಪತ್ರೆಗೆ ರುಕ್ಮಿಣಿ ಎಂಬ 17 ವರ್ಷದ ವಿದ್ಯಾರ್ಥಿನಿಯನ್ನು ಸೇರಿಸಿದೆ. ಅವಳಲ್ಲಿ ಲಿಂಗ ಬದಲಾವಣೆ ಕಾಣುತ್ತಿದೆ. ಅವಳಿಗೆ ಗಂಡು ಧ್ವನಿ ಬಂದಿದೆ. ಮುಖದ ಮೇಲೆ ಕೂದಲು ಬಂದಿವೆ. ಏನಾಗುವದೆಂಬುದಕ್ಕೆ ವೈದ್ಯರಿಗೆ ಪೂರ್ಣ ಭರವಸೆ ಇಲ್ಲ.

ಡಾಂಗೆ ಅಧ್ಯಕ್ಷರು

ಭಾರತ ಕಮ್ಯೂನಿಸ್ಟ್ ಪಕ್ಷದ ಅಧ್ಯಕ್ಷರಾಗಿ ಶ್ರೀ ಎಸ್. ಎ ಡಾಂಗೆಯವರು. ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ಇ ಎಂ ಎಸ್. ನಂಬೂದರಿ ಪಾದರು ಆಯ್ಕೆಯಾಗಿರೆಂದು ನವ ದೆಹಲಿ ವಂದಿ

ಶಾಂತಿ ಸಮ್ಮೇಳನ

ಕೇಂದ್ರ ಜರಾನಿನ ಲೇಕ್ ಬಿವ ಬಳಿ ಈ ಮಾಹೆ 7 ರಿಂದ 9 ರವರೆಗೆ ವಿಶ್ವ ಶಾಂತಿಗೆ ಕರೆಕೊಡಲು ಸಮ್ಮೇಳನ ಸೇರಲಿದೆ.

ಪಲಾಯನ

ಚೀನಾದ ಮಧ್ಯಭೂವಿಯಿಂದ ಸಮಾರು ನೂರು ಮಂದಿ ಹೆಂಗಸರು ಹಾಗೂ ಗಂಡಸರು ಹಾಂಗಕಾಂಗಿಗೆ ಪಲಾಯನ ಮಾಡಿದರೆಂದು ವರದಿಯಾಗಿದೆ

★

ಜೂರ್ ತಿಂಗಳನಲ್ಲಿ ವಿಶ್ವಸಂಸ್ಥೆಯ ಜನಂಲ್ ಅಸೆಂಬ್ಲಿಯಲ್ಲಿ ಕಾಶ್ಮೀರ ಪ್ರಶ್ನೆ ಸಂಭವವಿದೆಯೆಂದು ನ್ಯೂಯಾರ್ಕಿನ ವರದಿಯೊಂದು ತಿಳಿಸುತ್ತದೆ

ಹಾಲೆಂಡಿನ ರಾಣಿ ಜೂಲಿಯಾನಾ ರವರ 53 ನೇ ವರ್ಧಂತಿ ಉತ್ಸವ ಆಚರಣೆ ಮಾಡದಿರಲು ಬಾರ್ಡ್‌ವೆಲ್ಡಿನ ಸ್ಥಳೀಯ ಸಮಿತಿ ಮಾಡಿದ ನಿರ್ಧಾರದ ವಿರುದ್ಧ ನೂರಾರು ಯುವಕರು ಮೊನ್ನೆ ರಾತ್ರಿ ಗಲಭೆ ನಡೆಸಿದರು

6 ತಿಂಗಳಿಂದ ಸಿಂಗ್ಪುರದ ಒಂದೇ ಬಟ್ಟೆಯ ಗಿರಣಿಯಲ್ಲಿ ಮುಷ್ಕರ ನಡೆಯುತ್ತಿದ್ದು ಈಗ ಅದು ಬಂದಾಯಿತು

ಪಂಜಾಬು ಮಂತ್ರಿಮಂಡಲದಲ್ಲಿ ಬಿಕ್ಕಟ್ಟು

ಚಂಡೀಘರ್‌ದಿಂದ ಬಂದಿರುವ ವರದಿಯ ಪ್ರಕಾರ ಪಂಜಾಬಿನ ಮಂತ್ರಿಮಂಡಲ ವಿಸರ್ಜಿತವಾಗುವ ಸಂಭವವಿದೆ ಮುಖ್ಯ ಮಂತ್ರಿ ಡಾ॥ ಪ್ರತಾಪ ಸಿಂಗ್ ಕೈರೋರಿಗೂ ಮತ್ತು ಪಂಜಾಬಿನ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ ದರ್ಬಾರಿಸಿಂಗರಿಗೂ ಭಿನ್ನಾಭಿಪ್ರಾಯ ಹೆಚ್ಚಾಗಿದೆ. ದರ್ಬಾರಿ ಸಿಂಗರೊಡನೆ ತಮ್ಮ ಬಾಂಧವ್ಯ ತೊಂದರೆಗೆ ಸಿಲುಕಿದೆ ಎಂದು ಮಂತ್ರಿಮಂಡಲದ ತಮ್ಮ ಸಹೋದ್ಯೋಗಿಗಳಿಗೆ ಕೈರೋರವರು ತಿಳಿಸಿರುವರೆಂದು ಗೊತ್ತಾಗಿದೆ. ದರ್ಬಾರಿ ಸಿಂಗನ್ನು ಮಂತ್ರಿಮಂಡಲದಿಂದ ಕೈಬಿಡುವುದೇ ವಿರುದ್ಧವಾದ ಅರ್ಥ

ಮಹಿಳೆಯರ ಮೇಲೆ ಅಕ್ರಮಣಕ್ಕೆ ಬಂಧನ

ಮೊರಿನಾ—ಧೋಲ್ಪುರ ರಸ್ತೆ 3 ನೇ ಶತಗತಿ ಗಾಡಿಯೆಂದು ಈರ್ವರು ಪ್ರಯಾಣಿಕರು ತಮ್ಮ ಪತ್ನಿಯರೊಂದಿಗೆ ಆರ್ ಎಂ ಎಸ್ ಗಾಡಿ ಹತ್ತಿದರು. ಇದು ಹೆಂಗಸರ ಗಾಡಿ ಎನ್ನಲು ಗಂಡಸರು ಇಳಿದರು. ಅಲ್ಲಿನ ಸ್ವಾಫ್‌ನವರು ಮಹಿಳೆಯರ ಮೇಲೆ ಅಕ್ರಮಣ ಮಾಡಿದರು. ಅನಂತರ ಧೋಲ್ಪುರ ನಿಲ್ದಾಣದ ಬಳಿ ಅವರನ್ನು ಹೊಂಚಳ್ಳಿದರೆಂದು ವರದಿ ತಿಳಿಸುತ್ತದೆ. ಆಗ್ರಾದಲ್ಲಿ ಆರ್ ಎಂ ಎಸ್ ಸ್ವಾಫಿನ 5 ಮಂದಿಯೂ ಬಂಧಿತರಾದರು

ಪಾದರಕ್ಷೆಗಳ ಉತ್ಪಾದನೆ

ಭಾರತದಿಂದ 25 ಲಕ್ಷ ಜೊತೆ ಪಾದರಕ್ಷೆಗಳು ರಫ್ತಾಗುತ್ತಿವೆ. ಪಂಚವಾರ್ಷಿಕ 2 ವರೆ ಕೋಟಿ ಏರುತ್ತಿದೆ. ಈಗ 100 ವಿಲಿಯ ಜೊತೆ ಪಾದರಕ್ಷೆಗಳು ತಯಾರಾಗುತ್ತಿವೆ. 65—66 ರಲ್ಲಿ 140ವಿ ಲಿಯ ಜೊತೆ ತಯಾರಾಗ್ಬುವುದು

ಮಹಿಳೆಯ ಸಾವು

ಬೆಂಗಳೂರು ಮಹಾತ್ಮಾ ಗಾಂಧಿ ರಸ್ತೆಯಲ್ಲಿ ನಿನ್ನೆ ಬೆಳಿಗ್ಗೆ ಲಾರಿಯೊಂದು ಡಿಕ್ಕಿಯಾಗಿ ಧನಲಕ್ಷ್ಮಿ ಎಂಬ ಸೈಕಲ್ ಸವಾರಳು ಮರಣಹೊಂದಿದಳು

ಹೊಸ ಮಾದರಿಯ ದರೋಡೆ

ಹೆಂಗಸರ ಮುಖ್ಯ ಜನರ ಸಂಖ್ಯೆ ತಿಳಿದು ಅನಂತರ ದರೋಡೆಯಾಡುತ್ತಿದ್ದ ಕ್ಯಾನು ಪತ್ತೆ ಆಗಿರುವದಾಗಿ ವಿಶಾಂತಿನ ವಾರ್ತೆ

ಪಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಶ್ಯಾಮ್ಲ ಜೋಯಿಸರಿಂದ
1 ದ್ವಾದಶಿ ಉತ್ತರಾಷಾಢ

× ಮೇ 9 ನಡೆಯಲಿದ್ದ ಪಿಎಸ್ಸಿ ಪರೀಕ್ಷೆ ಮುಂದುವರಿದಿದೆ ಎಂದು ಬೆಂಗಳೂರಿನ ವಾರ್ತೆ

ಅಯೂಬರ ಆರ್ಭಟ

ರಾಚಲ್ಪಿಂಡಿ 28— ಭಾರತದಲ್ಲಿ ಮುಸಲ್ಮಾನರ ಜೀವನವೆಷ್ಟು ಹೀನವಾಗಿದೆಯೆಂದೂ, ಮುಸ್ಲಿಮರು ಭಾರತದಲ್ಲಿ ಸುಖಶಾಂತಿಯಿಂದ ಬಾಳಲು ಅವಕಾಶವಿಲ್ಲವೆಂದೂ ಪಾಕಿಸ್ತಾನದಲ್ಲಿ ಹಿಂದೂಗಳೂ ಸೇರಿ ಎಲ್ಲ ಅಲ್ಪ ಸಂಖ್ಯಾಕರೂ ಸುಖವಾಗಿ ಸುರಕ್ಷಿತರಾಗಿ ಇರುವರಲ್ಲದೆ, ಬೇಕಾದಷ್ಟು ಸಂಪತ್ತನ್ನು ಶೇಖರಿಸುತ್ತಲೂ, ಅದನ್ನು ದೇಶದ ಹೊರಗೆ ಕಳುಹಿಸುತ್ತಲೂ ಇರುವರೆಂದೂ ಅಧ್ಯಕ್ಷ ಅಯೂಬರು ಹೇಳಿದರು ; ಪಾಕಿಸ್ತಾನದ ಮೇಲಿನ ವಿರೋಧಕ್ಕೆ ಭಾರತವು ಭಾರಿ ಸೈನ್ಯವನ್ನು ಎಲ್ಲಿಡಿಸಿರುವುದಾದರೂ, ದೇಶದೊಳಗೆ ಅಂಥ ಎಂಜ್ ಆರ್ಡರ್ ಇಲ್ಲವೆಂದೂ ಹೇಳಿದರು

ಮಾರ್ಜರರ ಮನವಿ

ನ್ಯೂಯಾರ್ಕ್— ಬ್ರಿಟನ್ನಿನ ಅಣುನಿರೋಧ ಮಾರ್ಜರರು, ಅಣು ಪ್ರಯೋಗ ಮುಂದಾಯಗೊಳಿಸಲು ಮತ್ತು ನಿಶ್ಯಸ್ತ್ರೀಕರಣ ನೆರವೇರಿಸಲು, ವಿಶ್ವ ಸಂಸ್ಥೆಯನ್ನು ಏನಂತಿಸಿ ಅರ್ಜಿಕೊಟ್ಟರು.

ವಿಚಿತ್ರ ವಿಷಯಗಳು

ಈಚೆಗೆ ಒಂದು ಕಡೆ ಸಮುದ್ರಸ್ನಾನ ಮಾಡುತ್ತಿದ್ದ ಒಬ್ಬನನ್ನು ಹಿಡಿಯಲು ಒಂದು ಶಾರ್ಕ್ ಪ್ರಾಣಿಯು ಬಂದಾಗ, ಅತನು ಘಟ್ಟಿಯಾಗಿ ಅಂಚಿ ಅದನ್ನು ಓಡಿಸಿದನು !

೦೦೦೦

ಒರ್ವಾದ ಅರಣ್ಯದಲ್ಲಿ ಒಂದು ಹುಲಿಯು ಒಬ್ಬ ಹೆಂಗಸಿನ ಮೇಲೆ ಬೀಳಲು, ಅವಳು ತನ್ನ ಉಟ್ಟ ಬಟ್ಟೆಯನ್ನು ಬಿಚ್ಚಿ ಹುಲಿಯ ಬಾಯಿಗೆ ತುಂಬಲು, ಅದು ಪರಾರಿಯಾಯಿತು.

೦೦೦೦

ಉತ್ತರ ರೊಡೀಷಿಯಾದ ಒಂದು ಸರೋವರದಲ್ಲಿ ಒಂದು ಮೊಸಳೆಯು ಒಬ್ಬ ಮನುಷ್ಯನನ್ನು ಹಿಡಿದುಕೊಂಡಿತು ; ಅವನು ಅದರ ಮೂಗನ್ನು ಬಲವಾಗಿ ಕಚ್ಚಿದ್ದರಿಂದ ಅದು ಅವನ್ನು ಬಿಟ್ಟು ತಲೆ ತಪ್ಪಿಸಿಕೊಂಡಿತು.

೦೦೦೦

ಆಸ್ಟ್ರೇಲಿಯಾದ ಬ್ರಿಸ್ಬೇನಿನಲ್ಲಿ ಒಬ್ಬ ಅರಣ್ಯ ನೌಕರನನ್ನು ಎದುರಿಸಲು ಒಂದು ಕಂಡಿಯು ಬಂದಾಗ, ಅತನು ತನ್ನ ಟೊಪ್ಪಿಗೆಯನ್ನು ಎತ್ತಿ 'ಹಲ್ಲೋ ಆಂಕಲ್,' ಎಂದು ನಮ್ರತೆಯಿಂದ ತಲೆಬಗ್ಗಿಸಿ ಹೇಳಲು, ಕಂಡಿಯು ಹೆದರಿ ಕೂಗುತ್ತಾ ಓಡಿಹೋಯಿತು !

೦೦೦೦

ಕೆನ್ಯಾದ ಮೊಂಬಾಸಾದಲ್ಲಿ ಒಬ್ಬಾತನು ತನ್ನ ಪುಲಗುವ ಕೋಣೆಯಲ್ಲಿ ಒಂದು ಕುರ್ಚಿ ಮೇಲೆ ಕೂತಿದ್ದಾಗ ಅಲ್ಲಿಗೆ ಕಿಟಕಿ ಗಾಜನ್ನು ಒಡೆದುಕೊಂಡು ಒಂದು ಚಿಂತೆ ನುಗ್ಗಿ ಬಂದಿತು ; ಅತನು ತಾನು ಕೂತಂತೆಯೇ ಕೂತಿದ್ದು, ತಣ್ಣನ್ನು ಮುಚ್ಚದೇ ಆ ಚಿಂತೆಯನ್ನು ದುರದುರನೆ ನೋಡಲು, ಅದು ಮತ್ತೊಂದು ಕಿಟಕಿ ಗಾಜನ್ನು ಒಡೆದುಕೊಂಡು ಓಡಿಹೋಯಿತು.

———

— ನಾಳೆ ಮೇ ಡೇ ಪ್ರಯುಕ್ತ ಸತ್ಯವಾದಿ ಕಾರ್ಯಾಲಯಕ್ಕೆ ರಜವಿದೆ —

SHAKTI SUDHA

A Superb Tonic

ವುಡ್‌ಲಾಂಡ್ ಅತ್ಯಮೋಘ 12 ನೇ ವಾರ

ಒಂದು ಲಕ್ಷಕ್ಕೂ ಹೆಚ್ಚು ಮಂದಿ ನೋಡಿ ಆನಂದಿಸುವ ಅತ್ಯಮೋಘ ಚಿತ್ರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಜನಭರಿತ 2 ನೇ ವಾರ

ಸಂಪೂರ್ಣ ರಾಮಾಯಣ

- ಕನ್ನಡ -

[ಪೂರ್ಣ ವರ್ಣಾಂಜಿತ ಚಿತ್ರ] [ದಿನವಹಿ 3 ಆಟಗಳು]





19 ನೇ ಶತಮಾನದಲ್ಲಿ ಅಮೇರಿಕಾದಲ್ಲಿ ಬಹು ಪ್ರಖ್ಯಾತ ಪುರುಷರಲ್ಲಿ ಒಬ್ಬರಾದ ಪ್ರಥಮ ರೈಲ್ವೇ ಇಂಜನ್ನು ನಿರ್ಮಿಸಿದ, ಮಿತ್ರರಾಂ ಅನೇಕ ದೇಶೋಭ್ಯುದಯ ಕಾರ್ಯಗಳನ್ನು ನೆರವೇರಿಸಿದ ಪೀಟರ್ ಕೂಪರ್‌ರ ಸಂಬಂಧಿಸಿದ ಚಿತ್ರಗಳು

Edited, Printed & Published by the Proprietor, Dharma Prachara Nirata M. S. Krishna Rao. at the Satyavadi Press Chamarajapuram, Mysore 4.